ಸಿಸಿನಂ.34/2023
ಡಿಡಬ್ಲ್ಯೂ: 1

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,</u>

<u>ಕುಮಟಾ.</u>

ಸಿಸಿ ನಂ. 34/2023

ಡಿಡಬ್ಲೂ : 1

| | | |
|---|---|---|
| ಹೆಸರು | : | ಶ್ರೀಮತಿ ಸುರೇಖಾ |
| ತಂದೆಯ ಹೆಸರು | : | ಬಾಬು ಗುನಗಿ |
| ವರ್ಷ | : | 53 ವರ್ಷ |
| ಉದ್ಯೋಗ | : | ಎಸ್ ಡಿ ಎ ಸಿ ಜೆ ಎಮ್ ನ್ಯಾಯಾಲಯ, ಕಾರವಾರ |
| ವಾಸ್ತವ್ಯ | : | ಶಿರಸಿ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 02-07-2024 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ಆರೋಪಿ ಪರವಾಗಿ : ಶ್ರೀ ಎಸ್ ಯು ಎ ವಕೀಲರಿಂದ :</u>**

ನಾನು ದಿಃ 05-04-2004 ರಿಂದ 2013 ರವರೆಗೆ ಕುಮಟಾ ನ್ಯಾಯಾಲಯದಲ್ಲಿ ಜವಾನಳು ಹಾಗೂ ಅಟೆಂಡರ್ ಆಗಿ ಕೆಲಸ ನಿರ್ವಹಿಸಿರುತ್ತೇನೆ .

2. ನನ್ನನ್ನು ಪ್ರದೀಪ ಬಾಳೇಕಾಯಿ ನ್ಯಾಯಾಧೀಶರ ಮನೆಯ ಕೆಲಸಕ್ಕೆ ಹಾಕಿದ್ದರು . ಮಧ್ಯಾಹ್ನ 2 ಗಂಟೆಗೆ ಅವರ ಮನೆ ಕೆಲಸ ಮುಗಿಸಿಕೊಂಡು ನಮ್ಮ ಮನೆಗೆ ಹೋಗಿ ಊಟ ಮಾಡಿಕೊಂಡು ಮತ್ತೇ ಕಚೇರಿ ಕೆಲಸಕ್ಕೆ ಬರುತ್ತಿದ್ದೆ . ದಿಃ 25-10-2011 ರಂದು ಪ್ರದೀಪ ಬಾಳೆಕಾಯಿ ಸಾಹೇಬರ ಹೆಂಡತಿ ಕೋರ್ಟ ಗೇಟ್ ಹತ್ತಿರ ಬಂದು ನಿಂತುಕೊಂಡಿದ್ದರು ಹಾಗೂ ಸಂತೆ ಹೋಗಬೇಕು ಬಾ ಎಂದು ಕರೆದರು. ಕಾರಣ ನನನಗೆ ಆಫೀಸ್ ಗೆ ಬರಲು ಆಗಲಿಲ್ಲ , ನಾನು ನನ್ನ ಬ್ಯಾಗನ್ನು ಹಾಗೂ ನೀರಿನ ಬಾಟಲನ್ನು ಎಪಿಪಿ ಯವರ ಕಚೇರಿಯಲ್ಲಿ ಇಟ್ಟು ಸಾಹೇಬರ ಹೆಂಡತಿ ಜೊತೆಗೆ ಸಂತೆಗೆ ಹೋದೆವು . ಸಂತೆಯಲ್ಲಿ ಸಾಮಾನು ತೆಗೆದುಕೊಂಡು ಕಿರಾಣಿ ಸಾಮಾನು ತೆಗೆದುಕೊಂಡು ಸಾಹೇಬರ ಮನೆಗೆ ಹೋಗಿ ಇಟ್ಟು ಪುನಃ

ಕೋರ್ಟಿಗೆ ಬಂದು ಎಪಿಪಿ ರೂಮಿಗೆ ಬ್ಯಾಗನ್ನು ಹಾಗೂ ನೀರಿನ ಬಾಟಲನ್ನು ನಾರಾಯಣ ನಾಯ್ಕರವರ ಹತ್ತಿರ ತೆಗೆದು ಕೊಂಡು ಆಫೀಸ್ ಗೆ ಬಂದೆನು . ಸ್ವಲ್ಪ ಹೊತ್ತಿನ ನಂತರ ನಾರಾಯಣರವರು ಬಂದು ನನ್ನ ಬ್ಯಾಗ್ ನ್ನು ಚೆಕ್ ಮಾಡು ಅಂತೆ ಹೇಳಿದರು . ಆದರೆ ನಾನು ಕೆಲಸದ ಮೇಲೆ ಇದ್ದೆ ಬ್ಯಾಗನ್ನು ಚೆಕ್ ಮಾಡಲು ಆಗಲಿಲ್ಲ . ಆರುಗಂಟೆಗೆ ಕೋರ್ಟ ಕೆಲಸ ಮುಗಿಸಿ ಮನೆಗೆ ಹೋದೆ , ನಾರಾಯಣ ಏಕೆ ಬ್ಯಾಗನ್ನು ಚೆಕ್ ಮಾಡುವಂತೆ ಹೇಳಿದ್ದರು ಎಂದು ಬ್ಯಾಗನ್ನು ಚೆಕ್ ಮಾಡಿದೆ . ಆಗ ನನ್ನ ಬ್ಯಾಗ್ ನಲ್ಲಿ ಸ್ಟೇಟ್ ಬ್ಯಾಂಕ್ ಕುಮಟಾ ಶಾಖೆಯ ಪಾಸ್ ಬುಕ್ ಹಾಗುಾ ಚೆಕ್ ಪುಸ್ತಕ ಇರಲಿಲ್ಲ. ಮಾರನೇ ಬೆಳಿಗ್ಗೆ ಕೋರ್ಟಿಗೆ ಬಂದು ನಾನು ನಾರಾಯಣರವರನ್ನು ಕೇಳಿದೆ . ಆಗ ನಾರಾಯಣರವರು ನಾಗೇಶ ನಿಮ್ಮ ಚೆಕ್ ಬುಕ್ ಹಾಗೂ ಪಾಸ್ ಬುಕ್ ನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು . ಆಗ ನಾಗೇಶನ್ನು ನಾನು ಕೇಳಿದೆ . ಆದರೆ ಅವರು ಪಾಸ್ ಬುಕ್ ಹಾಗುಾ ಚೆಕ್ ಪುಸ್ತಕ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು . ನಾನು ಸದರಿ ವಿಷಯವನ್ನು ಬಾಳೇಕಾಯಿ ಸಾಹೇಬರ ಹೆಂಡತಿಗೆ ತಿಳಿಸಿದೆ . ಅವರು ಸಾಹೇಬರಿಗೆ ಸದರಿ ವಿಷಯವನ್ನು ತಿಳಿಸುವಂತೆ ಹೇಳಿದರು . ಆಗ ನಾನು ಮಾನ್ಯ ನ್ಯಾಯಾಧೀಶರಿಗೆ ಸದರಿ ವಿಷಯವನ್ನು ತಿಳಿಸಿದೆ . ಅವರು ನನಗೆ ಬ್ಯಾಂಕಿಗೆ ಅರ್ಜಿಯನ್ನು ಕೊಡಲು ಹೇಳಿದರು . ನನಗೆ ಸರಿಯಾಗಿ ಬರೆಯಲು ಬರದ ಕಾರಣ ನಾನು ನ್ಯಾಯಾಲಯದಲ್ಲಿ ಒಬ್ಬರು ವಕೀಲರ ಹತ್ತಿರ ಅರ್ಜಿಯನ್ನು ಬರೆಸಿ ನಂತರ ಟೈಪ್ ಮಾಡಿಸಿ ಸ್ಟೇಟ್ ಬ್ಯಾಂಕಿಗೆ ಅರ್ಜಿಯನ್ನು ಕೊಟ್ಟೆ . ಇನ್ನೊಂದು ಅರ್ಜಿಯನ್ನು ಕುಮಟಾ ಪೋಲಿಸ್ ಠಾಣೆಗೆ ಕೊಟ್ಟೆ . ಪೋಲಿಸರು ಸ್ವೀಕೃತಿಯನ್ನು ಕೊಟ್ಟಿರುತ್ತಾರೆ . ಸಾಕ್ಷಿ ಸದರಿ ಸ್ವೀಕೃತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಆರ್ -1 ಎಂದು ಗುರುತಿಸಲಾಯಿತು . ಸದರಿ ದಾಖಲಾತಿ ಗುರುತಿಸುವಿಕೆಗಾಗಿ ಫಿರ್ಯಾದುದಾರ ಪರ ವಕೀಲರು ಆಕ್ಷೇಪಿಸಿದ್ದು ಸದರಿ ದಾಖಲಾತಿ ಪೋಲಿಸರು ನೀಡಿದ ಸ್ವೀಕೃತಿಯ ಮೂಲ ಪ್ರತಿಯಾಗಿದ್ದರಿಂದ ಮನವಿಯನ್ನು ತಿರಸ್ಕರಿಸಲಾಯಿತು . ಸದರಿ ಸ್ವೀಕೃತಿಯಲ್ಲಿ ಖಾತೆ ನಂಬರನ್ನು

ಬ್ಯಾಂಕಿನಿಂದ ಪಡೆದುಕೊಂಡು ಅರ್ಜಿಯಲ್ಲಿ ಬರೆದಿರುತ್ತೇನೆ . ನಂತರ 2018 ಎಪ್ರಿಲ್ ತಿಂಗಳಲ್ಲಿ ನನ್ನ ಅಕೌಂಟ್ ನ್ನು ಕ್ಲೋಜ್ ಮಾಡಿಸಿರುತ್ತೇನೆ .

3. ಫಿರ್ಯಾದುದಾರರು ನನಗೆ ವಕೀಲರ ಮೂಲಕ ನೋಟಿಸನ್ನು ಕಳುಹಿಸಿದರು . ಆಗ ನಾನು ಕಾರವಾರದ ಎಸ್ ಪಿ ಕಚೇರಿಗೆ ಹೋದೆ ಹಾಗೂ ಅಲ್ಲಿ ಒಂದು ಕಂಪ್ಲೆಂಟ್ ನ್ನು ಕೊಟ್ಟಿರುತ್ತೇನೆ . ಅವರು ಸದರಿ ಕೇಸು ಕುಮಟಾ ಪೋಲಿಸ್ ಠಾಣೆಗೆ ಬರುತ್ತದೆ ಎಂದು ಅವರು ಕುಮಟಾ ಪೋಲಿಸ್ ಠಾಣೆಯ ಪಿ ಎಸ್ ಐ ರವರಿಗೆ ಫೋನ್ ಮಾಡಿ ಹೇಳಿದರು . ನಾನು ಸೋಮವಾರ ಕುಮಟಾ ಪೋಲಿಸ್ ಠಾಣೆಗೆ ಹೋಗಿದ್ದೆ ಆದರೆ ಯಾರೋ ಸ್ವಾಮಿ ಬಂದಿದ್ದ ಕಾರಣ ನನಗೆ ಮಂಗಳವಾರದವರೆಗೂ ಪಿ ಎಸ್ ಐ ರವರು ಸಿಗಲಿಲ್ಲ . ಬುಧವಾರ ಅಥವಾ ಗುರುವಾರ ಸರಿಯಾಗಿ ನೆನಪಿಲ್ಲ ನಾನು ಪುನಃ ಪೋಲಿಸ್ ಠಾಣೆಗೆ ಹೋಗಿದ್ದೆ ಆಗ ಪಿಎಸ್ ಐ ರವರು ನನ್ನ ದೂರನ್ನು ನೋಡಿ ಇಬ್ಬರು ಪೋಲಿಸ್ ಸಿಬ್ಬಂದಿಗಳನ್ನು ಕಳುಹಿಸಿ ನಾಗರಾಜ ಪಾಂಡುರಂಗ ರವರನ್ನು ಠಾಣೆಗೆ ಕರೆಸಿದರು ಹಾಗೂ ಅವರನ್ನು ಕೇಳಿದರು . ಆಗ ನಾಗರಾಜ ಪಾಂಡುರಂಗ ನನ್ನ ಮಾವ ನಾಗೇಶರವರು ತಂದುಕೊಟ್ಟಿದ್ದರು ತಪ್ಪಾಯಿತು ನಾನು ಎಲ್ಲಾ ಚೆಕ್ ಗಳನ್ನು ವಾಪಸ್ಸು ಕೊಡುತ್ತೇನೆ ಎಂದು ಕೈಮುಗಿದು ಕೇಳಿದರು . ಆಗ ಪೋಲಿಸರು ನಿಮ್ಮ ಮಾವನನ್ನು ಕರೆದುಕೊಂಡು ಬನ್ನಿ ಹಾಗೂ ಅವರ ಏನೇನು ವಸ್ತುಗಳು ಇವೆಯೊ ಅವುಗಳನ್ನು ತೆಗೆದುಕೊಂಡು ಬನ್ನಿ ಎಂದು ನಾಗರಾಜ ಪಾಂಡುರಂಗರವರಿಗೆ ಹೇಳಿದರು ಹಾಗೂ ಚೆಕ್ ಪುಸ್ತಕ ತೆಗೆದುಕೊಂಡು ಬರುತ್ತೇನೆ ಎಂದು ಹೋದವರು ಅರ್ಧ ಗಂಟೆಯಾದರೂ ಬಂದಿಲ್ಲ . ನಂತರ ಅವರ ಜೊತೆ ವಕೀಲರು ಬಂದು ನಾವು ನ್ಯಾಯಾಲಯದಲ್ಲಿ ನೋಡಿಕೊಳ್ಳುತ್ತೇವೆ , ಅವರು ತಮ್ಮ ವಿಚಾರವನ್ನು ನ್ಯಾಯಾಲಯದಲ್ಲಿ ಹೇಳಿಕೊಳ್ಳಲಿ ಎಂದು ಹೇಳಿದರು. ಆಗ ಪಿಎಸ್ ಐ ರವರು ರವರು ನಾನು ನಡೆದ ವಿಚಾರವನ್ನು ಎಸ್ ಪಿ ರವರಿಗೆ ಹೇಳುತ್ತೇನೆ , ಏನೇ ಇದ್ದರೂ ನ್ಯಾಯಾಲಯದಲ್ಲಿ ನೋಡಿಕೊಳ್ಳಿ ಎಂದು ಹೇಳಿದರು .

4. ನಿಆರ್ –1 ರ ಜೊತೆಗೆ ಕೊಟ್ಟಿರುವ ಕಂಪ್ಲೆಂಟ್ ಕಾಪಿ ಹಾಗೂ ಬ್ಯಾಂಕಿನ ದಾಖಲಾತಿಗಳನ್ನು ಕೊಡುವಂತೆ ಪೋಲಿಸರಲ್ಲಿ ಕೇಳಿದ್ದೆ . ಆದರೆ ಅವರು ನಾವು ಅಷ್ಟು ವರ್ಷ ದಾಖಲಾತಿಗಳನ್ನು ಇಟ್ಟುಕೊಳ್ಳುವುದಿಲ್ಲ, ಸುಟ್ಟು ಬಿಡುತ್ತೇವೆ ಕಾರಣ ನಾವು ಕೊಟ್ಟಿರುವ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಕೊಡಿ ಎಂದು ಹೇಳಿದರು . ಆದರೆ ಪೋಲಿಸರು ನಾನು ಸ್ವೀಕೃತಿ ಜೊತೆಗೆ ಹಾಜರು ಪಡಿಸಿದ ದಾಖಲಾತಿಗಳನ್ನು ಕೊಡಲಿಲ್ಲ. ಹಿಂಬರಹ ಮಾತ್ರ ಕೊಟ್ಟಿರುತ್ತಾರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.